<u>ದಿನಾಂಕಃ **11.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ದಿ. 13.09.2017 ರಂದು ರಾಮಚಂದ್ರ, ರಹೀಮಾ, ಆಸಿಫ್ ರವರುಗಳು ಮಹಾತ್ಮ ಗಾಂಧೀಜಿ ಟ್ರಸ್ಟ್ ನಲ್ಲಿ ಸಾಲ ವಸೂಲಿಗಾರರಾಗಿದ್ದರು. ರಾಜೇಶ್ ನಬಾರ್ಡ್ ಮ್ಯಾನೇಜರ್ ಆಗಿದ್ದರು. ಇವರುಗಳ ವಿರುದ್ದ ನಾನು ದೂರು ಕೊಟ್ಟಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ 1 ಎಂದು ಗುರುತಿಸಲಾಯಿತು. ರಾಮಚಂದ್ರ ರವರು ರೂ. 9 ಲಕ್ಷ ಹಣ, ರಹೀಮಾ ರವರು ರೂ. 8 ಲಕ್ಷ ಹಣ, ಆಸಿಫ್ ರವರು ರೂ. 2 ಲಕ್ಷ ಹಣವನ್ನು ಅವ್ಯವಹಾರ ಮಾಡಿರುತ್ತಾರೆ. ರಾಜೇಶ್ ನಬಾರ್ಡ್ ಮ್ಯಾನೇಜರ್‌ರವರು ಅವರನ್ನು ಈ ಹಣದ ಬಗ್ಗೆ ಕೇಳಿದಾಗಲೆಲ್ಲ ಹಣ ಬಂದಿದೆ ಎಂದು ನನಗೆ ತಿಳಿಸುತ್ತಿದ್ದರು. ನಬಾರ್ಡ್ ಮುಖ್ಯ ಕಚೇರಿಯಿಂದ ನಮಗೆ ಪತ್ರ ವ್ಯವಹಾರವಾದಾಗ ಈ ಹಣ ಬ್ಯಾಂಕಿಗೆ ಜಮಾ ಆಗಿಲ್ಲ ಎಂದು ಗೊತ್ತಾಗಿರುತ್ತದೆ. ದಿ. 14.09.2017 ರಂದು ರವಿ ಎಂಬುವವರ ಮನೆಗೆ ಈ ಹಣ ಪಾವತಿ ಬಗ್ಗೆ ಪರಿಶೀಲಿಸಲು ಹೋಗಿದ್ದಾಗ 1 ನೇ ಆರೋಪಿ ರವಿ ಅವರಿಂದ ರೂ. 72 ಸಾವಿರ ಹಣ ಪಡೆದಿದ್ದು ಅದನ್ನು ನಬಾರ್ಡ್ ಸಂಸ್ಥೆಗೆ ಕಟ್ಟಿರುವುದಿಲ್ಲ ಎಂದು ಒಪ್ಪಿ ಕೊಂಡರು. ರವಿ ಅವರಿಂದ ರೂ. 72 ಸಾವಿರ ಹಣ ಪಾವತಿ ಆದ ಬಗ್ಗೆ ರಶೀದಿಗಳನ್ನು ಪಡೆದು ಮಾಡಿದೆವು. ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ 2 ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ